ಅವರ ಬಾಯಲ್ಲಿ ಅಂದು ಮೊದಲ ಸಲ ಕೇಳಿದ್ದೆ. ನಿರಂಜನರು ಅಂಥ ಪ್ರಮುಖ ಲೇಖಕರೆ...!

ಹೀಗೆ ಶಾಲೆಯಲ್ಲಿ ಹುಯಿಲಗೋಳ ಸರ್, ಮತ್ತು ಹೊರಗೆ ವೆಂಕಮ್ಮ ಅವರು ನನ್ನ ಸಾಹಿತ್ಯಿಕ ಓದಿಗೆ ನೀರೆರೆಯುತ್ತಿದ್ದರು. ವೆಂಕಮ್ಮ ತಮ್ಮ ಗ್ರಂಥಾಲಯದ ಆಯ್ದ ಪುಸ್ತಕಗಳನ್ನು ಓದಲು ಕೊಡುತ್ತಿದ್ದರು. ಅವರು ಕೊಟ್ಟ ನಿರಂಜನರ 'ಅಭಯ' ಎಂಬ ಕಾದಂಬರಿಯನ್ನು ಓದಿದೆ (ಮೇ 1956). ಅನಕೃ, ಕಟ್ಟೀಮನಿ, ತರಾಸು ಅವರ ಕೆಲವು ಕೃತಿಗಳನ್ನು ಮೊದಲೇ ಓದಿದ್ದೆ. ಅವರಿಗಿಂತ ಭಿನ್ನ ಬಗೆಯ ಶೈಲಿ, ಭಾಷೆ, ವಿಷಯವಸ್ತು- ಬಡವರು, ಮಹಿಳೆಯರು, ನೊಂದವರ ಬಗ್ಗೆ ತೀವ್ರ ಸಾಮಾಜಿಕ ಕಳಕಳಿ ತುಂಬಿದ ಕೃತಿಯಾಗಿತ್ತು 'ಅಭಯ'. ನಿರಂಜನರ ಪುಟ್ಟ ಪುಟ್ಟ ಶಬ್ದ, ಸಾಲು, ಸಾಂಕೇತಿಕವಾದ ಸಂಭಾಷಣೆಗಳು ಮನಸ್ಸಿನಲ್ಲಿ ಉಳಿದುಬಿಟ್ಟವು. ಅಭಯಾಶ್ರಮದ ನಾಯಕಿ ತುಂಗಮ್ಮ ನನ್ನನ್ನು ಬಹಳ ಕಲಕಿದ, ಜೀವಂತ ಪಾತ್ರ. ದೀರ್ಘ ಕಾಲದಿಂದ ನಮ್ಮ ಸಮಾಜವನ್ನು ಕಾಡುತ್ತಿರುವ ಬಡತನ, ಹೆಣ್ಣುಮಕ್ಕಳ ಶೋಷಣೆ, ಕೆಲವು ಪುಂಡರ, ಹಣವಂತರ ದಬ್ಬಾಳಿಕೆಯ ಸಮಸ್ಯೆಯನ್ನು ನಿರಂಜನರು ದಿಟ್ಟತನದಿಂದ ಚಿತ್ರಿಸಿದ್ದರು. ಹೆಣ್ಣುಮಕ್ಕಳ ಉದ್ಧಾರಕ್ಕಾಗಿ ಕಟಿಬದ್ಧವಾಗಿ ದುಡಿಯುವ 'ಅಭಯ'ದ ದೊಡ್ಡಮ್ಮನಂಥವರು ನಮ್ಮ ಸಮಾಜದಲ್ಲಿ ತಮ್ಮ ತ್ಯಾಗ-ಜೀವನ, ನಿಷ್ಠೆ, ಕ್ರಾಂತಿಕಾರಕ ಹೆಜ್ಜೆಗಳಿಂದ ಅನೇಕ ಅನಾಥರಿಗೆ, ಅಬಲರಿಗೆ ಆದರ್ಶ ಮಹಿಳೆಯಾಗಬಲ್ಲರು. ವನಿತಾ ಸೇವಾಸಮಾಜದ ವೆಂಕಮ್ಮನಲ್ಲಿಯೂ ಇಂಥ ಒಬ್ಬ 'ದೊಡ್ಡ ಅಮ್ಮ'ನೇ ಹುದುಗಿದ್ದರು ಎಂದು ಭಾಸವಾಗತೊಡಗಿತ್ತು.

ವೆಂಕಮ್ಮ ನಾನು ಓದಿದ ಕೃತಿಯ ಬಗ್ಗೆ ಕೇಳಿಕೊಂಡು, ಮತ್ತೆ ಬೇರೆ ಪುಸ್ತಕ ಕೊಡುತ್ತಿದ್ದರು. 'ಅಭಯ' ಓದಿದ ನಂತರದ ದಿನಗಳಲ್ಲಿ ಒಮ್ಮೆ, "ನಾನು 'ಅಭಯ'ವನ್ನು ಮತ್ತೆ ಮತ್ತೆ ಓದುತ್ತೇನೆ, ಅದು ನಮ್ಮ ಬಗ್ಗೆ, ನಮ್ಮ ಸಮಾಜದ ಬಗ್ಗೆ ಬರೆದಂತಿದೆ" ಎಂದು ಹೇಳಿದರು. ಆ ಕ್ಷಣದಲ್ಲಿ ವೆಂಕಮ್ಮ ಅವರ ಮಾತು ನನಗೆ ಎಂಥದೋ ಗೂಢ ಗವಿಯ ಬಾಗಿಲದಲ್ಲಿ ನಿಲ್ಲಿಸಿದಂತೆ ಅನಿಸಿತ್ತು. ಮುಂದೆ ಕೆಲವು ವರ್ಷಗಳ ನಂತರ ಅವರ ಮಾತಿನ 'ಒಳನೋವು', ನಿರಂಜನರ ಕಾದಂಬರಿಯಲ್ಲಿ ಬರುವ ಸ್ಥಿತಿ-ಗತಿಗಳನ್ನು 'ವೆಂಕಮ್ಮ ಪರಿಭಾವಿಸಿಕೊಂಡ ಸಂಕಟ', ನಿರಂಜನರ ನಿರೀಕ್ಷಿತ ಉದ್ದೇಶ ನನಗೆ ಅರ್ಥವಾಗಿತ್ತು.

## 2

ಎಸ್ಎಸ್ಸಿ ಪಾಸಾಗಿ ಕರ್ನಾಟಕ ಕಾಲೇಜಿನಲ್ಲಿ ಎಫ್‌ವೈ ಆರ್ಟ್ಸ್‌ಗೆ ಸೇರಿಕೊಂಡೆ. ಕಾಲೇಜಿನ ಗ್ರಂಥಾಲಯದಲ್ಲಿ ಕುಳಿತು, ಓದುವುದಲ್ಲದೇ, ವಾರವಾರ ಮನೆ-ವಾಚನಕ್ಕೆ ಪುಸ್ತಕ ಕೊಡುವ ಪರಿಪಾಟಿಯಿತ್ತು. ಕನ್ನಡದ ಪ್ರಸಿದ್ಧ ಲೇಖಕರಾದ ಅನೇಕರು ನಮ್ಮ ಅಧ್ಯಾಪಕರಾಗಿದ್ದರು. ವಿ.ಕೃ. ಗೋಕಾಕರು ನಮ್ಮ ಪ್ರಿನ್ಸಿಪಾಲರು. ಸ.ಸ. ಮಾಳವಾಡ, ಎಸ್.ಆರ್. ಮಳಗಿ, ವಿ.ಎಂ. ಇನಾಮದಾರ ಮುಂತಾದವರು ಕಲಿಸುತ್ತಿದ್ದರು. ಅದೊಂದು ಸಾಹಿತ್ಯ ಕಲಾಶಾಲೆಯೇ ಆಗಿತ್ತು. ವಿವಿಧ ಸಾಂಸ್ಕೃತಿಕ ವಿಭಾಗಗಳಿಂದ ವಾರದಲ್ಲಿ ಮೂರ್ನಾಲ್ಕು ಕಾರ್ಯಕ್ರಮ ನಡೆಯುತ್ತಿದ್ದವು. ಹೊರಗಿನಿಂದಲೂ ಕೆಲವು ಪ್ರಮುಖರು ಅತಿಥಿಗಳಾಗಿ ಬರುತ್ತಿದ್ದರು. ಮಳಗಿ ಅವರು ಚೇರ್‌ಮನ್ ಆಗಿದ್ದ 'ಕರ್ನಾಟಕ ಸಂಘ'ವು ನನ್ನ ಸಾಹಿತ್ಯಾಸಕ್ತಿಯನ್ನು ಬಹಳ ಕೆರಳಿಸಿತ್ತು. ನಾವು ದೀಪಾವಳಿ ರಜೆ ಮುಗಿಸಿಕೊಂಡು ಬಂದ ಕೂಡಲೇ, ಒಮ್ಮೆ ಅವರು, ನಮ್ಮಲ್ಲಿ ಪ್ರಸಿದ್ಧ ಕಾದಂಬರಿಕಾರರಾದ ನಿರಂಜನರು ಒಂದು ಕಾರ್ಯಕ್ರಮಕ್ಕೆ ಬರಲಿದ್ದಾರೆ ಎಂದು ಘೋಷಿಸಿದರು.

ನಮ್ಮ ಕಾಲೇಜಿನಲ್ಲಿ ನಿರಂಜನರ ಭಾಷಣವಾಯಿತು (1957 ಡಿಸೆಂಬರ್ 14). ಗೋಕಾಕರ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮಕ್ಕೆ ಊರಿನ ಕೆಲ ಸಾಹಿತ್ಯಾಸಕ್ತರೂ ಬಂದಿದ್ದರು. ಸಭಾಂಗಣ ತುಂಬಿ ಹೋಗಿತ್ತು. ಹಿಂದೀ ವಿದ್ಯಾಲಯದಲ್ಲಿ ನನಗೆ ಕಲಿಸುತ್ತಿದ್ದ ಪಂಚಾಕ್ಷರಿ ಹಿರೇಮಠರು ನಿರಂಜನರನ್ನು ಕರೆತಂದಿದ್ದರು, ಕಾರ್ಯಕ್ರಮದಲ್ಲಿ ನಿರಂಜನರ ಪರಿಚಯವನ್ನೂ ಅವರೇ ಮಾಡಿಕೊಟ್ಟರು. ನಿರಂಜನರು ಧಾರವಾಡಕ್ಕೆ ಬಂದಿದ್ದು ಮೊದಲ ಸಲ ಎಂದು ತಿಳಿಯಿತು. ಇನ್ನು ಮುಂದೆ ಧಾರವಾಡದಲ್ಲಿ ನೆಲೆಸುವ ವಿಚಾರದಿಂದಲೇ ಅವರು ಧಾರವಾಡಕ್ಕೆ ಬಂದಿದ್ದಾರೆ ಎಂದು ಹೇಳಿದರು. ನಿರಂಜನರು ಬೆಂಗಳೂರಿನವರಲ್ಲ, ಮಂಗಳೂರು ಕಡೆಯವರು ಎಂದು ತಿಳಿಯಿತು.

ಸ್ಫುರದ್ರೂಪಿ ನಿರಂಜನರು ಸಾಧಾರಣ ಬಿಳಿಯ